ಸಾಕ್ಷಿಯನ್ನು ದಿನಾಂಕಃ 20-11-2018 ರಂದು ಕರೆದು ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು ಃ ಶ್ರೀ. ಐ ಎಚ ಎ ಪ್ರತಿವಾದಿ ಪರ ವಕೀಲರಿಂದ ಃ

ದಾವಾ ಆಸ್ತಿ ಜಮೀನಾಗಿರುತ್ತದೆ. ದಾವಾ ಆಸ್ತಿಯ ಮೂಲ ಮಾಲೀಕರ ಹೆಸರು ಗೌಸಮೋದ್ದಿನ ಕೊಡತಿ ಆಗಿರುತ್ತದೆ. ಸದರೀಯವರು ನನ್ನ ಅಜ್ಜ. ನನ್ನ ಅಜ್ಜನಿಗೆ ಮೂರು ಜನ ಗಂಡು ಮಕ್ಕಳು. ಅವರ ಹೆಸರು ಅಬ್ಬಾಸ, ಮೆಹಬೂಬಸಾಬ ಮತ್ತು ಹಜರತಸಾಬ. ಹಿರಿಯ ಮಗ ಅಬ್ಬಾಸ ಈಗ ಮರಣ ಹೊಂದಿರುತ್ತಾರೆ. 1 ಮತ್ತು 2 ನೇ ವಾದಿಯರು ಅಬ್ಬಾಸರವರ ವಾರಸುದಾರರು. ಹಜರತಸಾಬ ಈಗ ಮರಣ ಹೊಂದಿರುತ್ತಾರೆ. ಸದರೀಯವರಿಗೆ ನಾನೊಬ್ಬನೇ ವಾರಸುದಾರರಾಗಿರುತ್ತೇನೆ. ನನ್ನ ದೊಡ್ಡಪ್ಪ ಮೆಹಿಬೂಬಸಾಬ ಅವರು ಮರಣ ಹೊಂದಿರುತ್ತಾರೆ. ಅವರಿಗೆ 1 ನೇ ಪ್ರತಿವಾದಿ ಇಬ್ರಾಹಿಂ ಕೊಡತಿ ರವರು ಒಬ್ಬನೇ ಮಗನಿದ್ದು, ಅವರು ಈಗ ಮರಣ ಹೊಂದಿರುತ್ತಾರೆ. ಅವರಿಗೆ ಡಿ1 ಎ ದಿಂದ ಡಿ1 ಇ ರವರು ವಾರಸುದಾರರಾಗಿರುತ್ತಾರೆ. ನಾವು ವಾದಿಯರು ಮತ್ತು ಡಿ1 ಎ ದಿಂದ ಡಿ1 ಇ ರವರು ಒಟ್ಟಿಗೆ ದಾವಾ ಆಸ್ತಿಯ ಸಾಮೂಹಿಕ ಕಬ್ಜಾದಲ್ಲಿ ಇರುತ್ತೇವೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಯಾವದೇ ಪಾಲುವಾಟ್ನಿ ಆಗಿರುವುದಿಲ್ಲ. ಅಬ್ಬಾಸರವರಿಗೆ ಹೋಗಬೇಕಾದ ಹಿಸ್ಸೆ 1 ಮತ್ತು 2 ನೇ ವಾದಿಗೆ ಹೋಗಬೇಕು ಎಂದರೆ ಸರಿ. ಹಜರತಸಾಬರವರಿಗೆ ಬರಬೇಕಾದ ಹಿಸ್ಸ ನನ್ನ ಪಾಲಿಗೆ ಬರಬೇಕು ಎಂದರೆ ಸರಿ. ಮೈಹಿಬೂಬಸಾಬರವರಿಗೆ ಬರಬೇಕಾದ ಹಿಸ್ಸೆ ಡಿ1 ಎ ದಿಂದ ಡಿ1 ಇ ರವರರಿಗೆ ಬರಬೇಕು ಎಂದರೆ ಸರಿ.

ಪ್ರತಿವಾದಿ 2 ಮತ್ತು 3 ರವರು ನಮ್ಮ ಅಜ್ಜನ ಅಣ್ಣನಾದ ಖಾದರಸಾಬ ರವರ ಮಕ್ಕಳು ಎಂದರೆ ಸರಿ. ಅದೇ ರೀತಿ ಪ್ರತಿವಾದಿ 4 ರಿಂದ 10 ರವರು ನನ್ನ ಅಜ್ಜನ ತಮ್ಮ ಪಕ್ರೂದ್ದೀನರವರ ಮಕ್ಕಳು ಎಂದರೆ ಸರಿ. ದಾವಾ ಅಸ್ತಿಯಲ್ಲಿ ಪ್ರತಿವಾದಿ 2 ರಿಂದ 10 ರವರಿಗೆ ಯಾವದೇ ಹಕ್ಕು, ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿ. ಸದರೀಯವರು ಬೇಕಾಯ್ದೆಶೀರವಾಗಿ ತಮ್ಮ ಹೆಸರಗಳನ್ನು ದಾವಾ ಆಸ್ತಿಯ ದಾಖಲೆಗಳಲ್ಲಿ ನಮೂದು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ 2 ರಿಂದ 10 ರವರು ದಾವಾ ಆಸ್ತಿಯ ಕಬ್ಜಾದಲ್ಲಿ ಯಾವತ್ತು ಇರಲಿಲ್ಲ ಮತ್ತು ಈಗಲೂ ಇಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮುಧೋಳ

ಸಾಕ್ಷಿಯ ಸಹಿಃ